# ಕಸವೆಂಬ ರಕ್ಕಸ



**ಸ್ವಚ್ಛತೆಯೆಂಬುದು ನಮಗೊಂದು ಸವಾಲು ಆಗಿ ಉಳಿದಿರುವುದಕ್ಕೆ ಮುಖ್ಯ ಕಾರಣ ನಮ್ಮಲ್ಲಿ ಸಾರ್ವಜನಿಕ ಪ್ರಜ್ಞೆಯ ಕೊರತೆ. ಎಳೆ ವಯಸ್ಸಿನಲ್ಲೇ ಸ್ವಚ್ಛತೆ ಬಗ್ಗೆ ಪಾಠ ಹೇಳಿಕೊಟ್ಟರೆ ಕಸದ ಸಮಸ್ಯೆಗೆ ಸ್ವಲ್ಪ ಮಟ್ಟಿಗಾದರೂ ಮುಕ್ತಿ ಸಿಗಬಹುದು.**

■ ಸವಿತಾ ಶಾಂತಪ್ರಿಯ

ಇತ್ತೀಚೆಗೆ ಒಮ್ಮೆ ಊರಿಗೆ ಹೊರಟಿದ್ದೆ. ಬಸ್ಸಿಗಾಗಿ ನಿಲ್ದಾಣದಲ್ಲಿ ಕಾಯುತ್ತಿದ್ದೆ. ಬೆಳಗಿನ ಹೊತ್ತಾದ್ದರಿಂದ ಬಸ್ ನಿಲ್ದಾಣದಲ್ಲಿ ಜನಜಂಗುಳಿ ಕಡಿಮೆಯಿತ್ತು. ಅಲ್ಲೇ ಒಂದು ಬದಿಯಲ್ಲಿ ಯಾರೋ ಅಡ್ಡಾದಿಡ್ಡಿಯಾಗಿ ಕಂಬಳಿ ಹೊದ್ದು ಮಲಗಿದ್ದರು. ಅಷ್ಟರಲ್ಲಿ ಟಿಸಿಯವರು ಅಲ್ಲಿಗೆ ಬಂದು ಉದ್ದದ ಕೋಲೊಂದರಲ್ಲಿ ಅವರನ್ನು ಕುಟ್ಟಿ ಎಬ್ಬಿಸಿ ಗದರುತ್ತಿದ್ದರು. ಇನ್ನೊಂದು ಬದಿಯಲ್ಲಿ ಬೆಳ್ಳಂಬೆಳಗ್ಗೆ ಇಬ್ಬರು ಪಾನ್ ಜಗಿಯುತ್ತಾ ನಿಂತಿದ್ದರು. ಕಸ ಗುಡಿಸುವವರು ಒಂದೆಡೆಯಿಂದ ಸ್ವಚ್ಛಗೊಳಿಸುತ್ತಾ ಬಂದು ಕೆಲಸ ಮುಗಿಸಿ ಹೊರಟು ಹೋದರು. ನಾನು ಕಾಯುತ್ತಿದ್ದ ಬಸ್ಸು ಬಂತು. ಇನ್ನೇನು ಬಸ್ಸೇರಬೇಕು ಅನ್ನುವಷ್ಟರಲ್ಲಿ ಪಾನ್ ಜಗಿಯುತ್ತಿದ್ದವರಲ್ಲೊಬ್ಬಾತ ಅಲ್ಲೇ ಉಗಿದ. ಪುಣ್ಯ ನಾನು ಬಚಾವಾದೆ ಎಂದುಕೊಳ್ಳುತ್ತಾ ಬಸ್ಸನ್ನೇರಿದೆ. ಅದೂ ದೂರದೂರಿಂದ ಬಂದ ಸರಕಾರಿ ಕೆಂಪು ಬಸ್ಸು. ಬಸ್ಸು ಏರುವಾಗಲೇ ಕಮಟು ವಾಸನೆ ಮೂಗಿಗೆ ರಾಚುವುದು ಸಹಜ. ಬಸ್ಸು ತುಂಬ ಕಾಗದ ಪ್ಲಾಸ್ಟಿಕ್ ಗಳ ರಾಶಿ. ಇದನ್ನೆಲ್ಲ ಸಹಿಸಿಕೊಂಡು ಆದಷ್ಟು ಎದುರಿನ ಆಸನವನ್ನು ಆರಿಸಿ ಕುಳಿತುಕೊಂಡೆ. ಇನ್ನೇನು ಬಸ್ಸು ಹೊರಡಬೇಕು ಎನ್ನುವ ಸಮಯದಲ್ಲಿ ಅಲ್ಲಿಗೆ ಕಿತ್ತಳೆ ಹಣ್ಣು ಮಾರಿಕೊಂಡು ಒಬ್ಬಾತ ಬಂದ. ನನ್ನ ಮುಂದಿನ ಆಸನದಲ್ಲಿ ಕುಳಿತಿದ್ದ ಹಿರಿಯರೊಬ್ಬರು ಆತನಿಂದ ಕಿತ್ತಳೆ ಖರೀದಿಸಿದರು. ಕೂಡಲೇ ಹಣ್ಣಿನ ಸಿಪ್ಪೆ ಸುಲಿದು ಸಿಪ್ಪೆಯನ್ನು ಅಲ್ಲೇ ರಸ್ತೆಗೆ ಎಸೆದರು.

ಇನ್ನೊಂದೆಡೆಯಲ್ಲಿ ಒಂದು ಮನೆಯವರು ತಮ್ಮ ಮನೆಯ ಒಳಗಿನ ಕಸವನ್ನೆಲ್ಲ ಹೊರಗೆ ತಂದು ರಸ್ತೆಯ ಆಚೆ ಬದಿಗೆ ಗಿಡದ ಬುಡಕ್ಕೆ ಎಸೆಯುತ್ತಿದ್ದರು. ಸರಕಾರಿ ಕಚೇರಿಯಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವವರು ಅವರು. ಆ ಬಡಾವಣೆಗೆ ಈಗಾಗಲೇ ಕಸ ಸಂಗ್ರಹಕ್ಕಾಗಿ ಎರಡು ದಿನಕ್ಕೊಮ್ಮೆ 'ಕಸವನ್ನು ತನ್ನಿರೋ' ಎಂದು ಹಾಡು ಹಾಕಿಕೊಂಡು ವಾಹನವೊಂದು ಬರುತ್ತಿತ್ತು. ಅದನ್ನು ಗಮನಿಸಿ ಅವರ ಬಳಿ ಹೋಗಿ 'ಕಸವನ್ನು ರಸ್ತೆಗೆ ಎಸೆಯಬೇಡಿ, ಕಸ ಸಂಗ್ರಹಿಸುವ ವಾಹನ ಬಂದಾಗ ಅಲ್ಲೇ ಕೊಡಿ ಎಂದಾಗ ಅದಕ್ಕೆಲ್ಲ ನನ್ನ ಬಳಿ ಸಮಯವಿಲ್ಲ; ಬೇಕಿದ್ದರೆ ಕಸದವರು ಹೆಕ್ಕಿಕೊಂಡು ಹೋಗಲಿ' ಎಂಬ ಉತ್ತರ ದೊರಕಿತು.

ಎಷ್ಟೋ ಕಡೆಗಳಲ್ಲಿ ಮನೆಯ ಕೊಳಚೆ ನೀರು ಹೋಗುವುದಕ್ಕಾಗಿ ಚರಂಡಿ ವ್ಯವಸ್ಥೆ ಇರುವುದಿಲ್ಲ. ಅಂತಹವರು ನೀರನ್ನು ತಮ್ಮದೇ ಯಾವುದಾದರೊಂದು ಗಿಡದ ಬುಡ ಹರಿಸುವುದು ಪದ್ಧತಿ. ಆದರೆ ಕೆಲವರು ಅದನ್ನು ತಮ್ಮ ಕಂಪೌಂಡ್‌ನ ಹೊರಗೆ ಹರಿಯಬಿಡುತ್ತಾರೆ. ಆ ಕೊಳಕು ನೀರು ತಗ್ಗಿನ ಮನೆಗಳೆಡೆಗೆ ಹರಿದು ಹೋಗುತ್ತಿರುತ್ತದೆ. ಅಂತಹ ಕಡೆಗಳಲ್ಲಿ ಬಳಕೆಯ ನೀರನ್ನು ತಮ್ಮ ಮನೆಯ ಕಂಪೌಂಡಿನ ಹೊರಗೆ ಬಿಡಬೇಡಿ ಎಂದು ಮನೆಯವರ ಬಳಿ ಹೇಳಿಕೊಂಡಾಗ ಅದೆಲ್ಲ ನಮ್ಮ ಕೆಲಸವಲ್ಲ, ಪಂಚಾಯತ್ ಅಥವಾ ನಗರಸಭೆಯ ಕೆಲಸ. ಡ್ರೈನೇಜ್ ವ್ಯವಸ್ಥೆ ಮಾಡಬೇಕಲ್ಲವೇ ಎಂಬ ಉತ್ತರ ಥಟ್ಟನೆ ಬರುತ್ತದೆ.

ಬೆಳಗಿನ ಹೊತ್ತೋ ಕತ್ತಲಾದ ಮೇಲೋ ನಗರದ ಹೊರವಲಯದಲ್ಲಿ ಅಡ್ಡಾಡುವಾಗ ವಾಹನದಲ್ಲಿ ಬಂದು ಚೀಲದಲ್ಲಿ ತುಂಬಿಕೊಂಡು ಬಂದಿದ್ದ ಕಸವನ್ನು ಅಲ್ಲೇ ಹರಿದು ಹೋಗುವ ತೊರೆಗೋ ಅಥವಾ ರೈಲ್ವೇ ಬ್ರಿಡ್ಜ್ ಮೇಲೆ ನಿಂತುಕೊಂಡು ಕೆಳಗಿನ ಹಳಿ ಮೇಲೋ ಎಸೆಯುವ ದೃಶ್ಯವೂ ಸರ್ವೇ ಸಾಮಾನ್ಯ. ಆ ರೀತಿ ಎಸೆಯುವ ಸಂದರ್ಭದಲ್ಲಿ ಅವರ ಮುಖದ ಮೇಲೆ ಒಂದಿನಿತೂ ಅಳುಕಿಲ್ಲ, ತಪ್ಪಿತಸ್ಥಭಾವವೂ ಇರುವುದಿಲ್ಲ. ಇನ್ನು ಕೆಲವೆಡೆ ಖಾಲಿ ನಿವೇಶನಗಳಿದ್ದಲ್ಲಿ ಅಲ್ಲಿ ಸಾಕಷ್ಟು ಕಸಕಡ್ಡಿಗಳು ಗಿಡಗಳು ಬೆಳೆದು ನಿಂತಿರುತ್ತದೆ. ಜೊತೆಗೆ ಇಂತಹ ನಿವೇಶನಗಳು ಇಡೀ ಬಡಾವಣೆಯ ಕಸದ ಗುಂಡಿಯಾಗುವುದೂ ಇದೆ. ಎಲ್ಲೆಲ್ಲಿಂದ ಕಸ ತಂದು ಇಂತಹ ಖಾಲಿ ನಿವೇಶನಗಳಲ್ಲಿ ಸುರಿದು ಹೋಗುವವರೂ ಇದ್ದಾರೆ. ಅದನ್ನು ಕೇಳುವವರೇ ಇರುವುದಿಲ್ಲ.

ಈ ಎಲ್ಲರ ವಾದಗಳೂ ತಾರ್ಕಿಕವಾಗಿ ಸರಿಯಾದುದೇ. ಆದರೆ ಸಾರ್ವಜನಿಕವಾಗಿ ನಮಗೂ ಒಂದಿಷ್ಟು ಜವಾಬ್ದಾರಿಗಳಿಲ್ಲವೇ. ಎಲ್ಲವನ್ನೂ